


# ಜಿಯೊ: ಡಾಟಾ ಲೋನ್ ಬೇಕಾ?

■ **ಶಶಿಕುಮಾರ್ ಸಿ.**

ಮೊಬೈಲ್‌ನಲ್ಲಿ ಡಾಟಾ ಇದ್ದಕ್ಕಿದ್ದಂತೆ ಖಾಲಿಯಾಯಿತೆಂದು 'ಜಿಯೊ' ಟೆಲಿಕಾಂ ಸಂಸ್ಥೆಯ ಗ್ರಾಹಕರು ಈಗ ಚಿಂತಿಸುವ ಅಗತ್ಯವಿಲ್ಲ. ಏಕೆಂದರೆ ಕಂಪನಿಯು ತನ್ನ ಗ್ರಾಹಕರ ಅನುಕೂಲಕ್ಕೆಂದು 'ರೀಚಾರ್ಜ್ ನೌ, ಪೇ ಲೇಟರ್' ಟ್ಯಾಗ್‌ಲೈನ್‌ನ 'ಎಮರ್ಜೆನ್ಸಿ ಡಾಟಾ ಲೋನ್' ಫೀಚರ್ ಅನ್ನು ಪ್ರಕಟಿಸಿದೆ.

ರೀಚಾರ್ಜ್ ಮಾಡಲು ಅಥವಾ ಮಾಡಿಸಲು ಆಗದಂತಹ ತುರ್ತು ಸಂದರ್ಭದಲ್ಲಿ ಈ ಯೋಜನೆಯು ಜಿಯೊ ಗ್ರಾಹಕರ ಅನುಕೂಲಕ್ಕೆ ನೆರವಾಗಲಿದೆ. 'ಎಮರ್ಜೆನ್ಸಿ ಡಾಟಾ ಲೋನ್' ಮೂಲಕ ಪ್ರತಿ ಗ್ರಾಹಕರು 5 ಜಿಬಿ ವರೆಗೂ ಡಾಟಾವನ್ನು ಸಾಲದ ರೂಪದಲ್ಲಿ ಪಡೆಯಬಹುದು. ಗ್ರಾಹಕರೊಬ್ಬರಿಗೆ ಜಿಯೊ 5 ವೋಚರ್ ಅನ್ನು ನೀಡುತ್ತದೆ. ಪ್ರತಿ ವೋಚರ್ ಅನ್ನು ಕ್ಲೈಮ್ ಮಾಡಿದರೆ 1 ಜಿಬಿ ಇಂಟರ್‌ನೆಟ್ ಸಿಗಲಿದೆ. ವೋಚರ್ ಅಥವಾ 1 ಜಿಬಿ ಇಂಟರ್‌ನೆಟ್‌ಗೆ ಕಂಪನಿಯು 11 ರೂಪಾಯಿಯನ್ನು ನಿಗದಿಪಡಿಸಿದ್ದು, ತುರ್ತು ಸಂದರ್ಭದಲ್ಲಿ ಇದನ್ನು ಗ್ರಾಹಕರು ಬಳಸಿಕೊಳ್ಳಬಹುದಾಗಿದೆ.

ಹೀಗೆ ಪಡೆಯಲಾದ ಡಾಟಾ ವ್ಯಾಲಿಡಿಟಿಯು ಆಯಾ ಸಮಯದಲ್ಲಿ ರಿಚಾರ್ಜ್ ಮಾಡಲಾದ ಬೇಸ್ ಪ್ಲ್ಯಾನ್ ವ್ಯಾಲಿಡಿಟಿಯಷ್ಟೇ ಇರುತ್ತದೆ. ಬೇಸ್ ಪ್ಲ್ಯಾನ್ ವ್ಯಾಲಿಡಿಟಿ ಇರುವವರೆಗೂ ಮಾತ್ರ ಈ ಲೋನ್ ಪಡೆದು ಡೇಟಾ ಬಳಸಬಹುದು. ಒಂದು ವೇಳೆ ಬೇಸ್ ಪ್ಲ್ಯಾನ್ ಆಕ್ಟಿವೇಟ್ ಆಗದಿದ್ದರೆ ಡೇಟಾ ಲೋನ್ ಪಡೆಯಲು ಸಾಧ್ಯವಾಗದು. ಬೇಸ್ ಪ್ಲ್ಯಾನ್ ಅವಧಿ ಮುಕ್ತಾಯವಾದ ಬಳಿಕ ರೀಚಾರ್ಜ್ ಮಾಡಿಸುವ ಮೂಲಕ ಪಡೆದ ಲೋನ್ ಅನ್ನು ಹಿಂದಿರುಗಿಸಬೇಕು.

ಗ್ರಾಹಕರ ಆಯ್ಕೆ ಮಾಡಿಕೊಳ್ಳುವ ತಿಂಗಳ ಪ್ಲ್ಯಾನ್‌ನ ಕನೆಕ್ಷನ್ ಮೇಲೆ ಡಾಟಾ ಲೋನ್ ಸಕ್ರಿಯವಾಗಿರುತ್ತದೆ. ಡಾಟಾ ಲೋನ್ ಪಡೆದ ನಂತರ ಎಷ್ಟು ದಿನಗಳ ಒಳಗೆ ಅದರ ಶುಲ್ಕವನ್ನು ಮರುಪಾವತಿಸಬೇಕು ಎಂಬುದನ್ನು ಜಿಯೊ ಈವರೆಗೂ ಸ್ಪಷ್ಟ ಪಡಿಸಿಲ್ಲ. 'ಎಮರ್ಜೆನ್ಸಿ ಡೇಟಾ ಲೋನ್' ಆಯ್ಕೆಯೊಳಗೆ ಪಡೆದ ಡಾಟಾ ಲೋನ್‌ನ ಪೇಮೆಂಟ್ ಅನ್ನು ಪ್ರತ್ಯೇಕವಾಗಿಯೂ ಮಾಡಬಹುದು.

ಒಂದು ವೇಳೆ ಲೋನ್ ಪಡೆದದ್ದಕ್ಕೆ ಹಣವನ್ನು ರೀಚಾರ್ಜ್ ಮೂಲಕ ಹಿಂದಿರುಗಿಸದಿದ್ದರೆ ನಿಮ್ಮ ಮೊಬೈಲ್ ಸಂಖ್ಯೆಯ ಕಾರ್ಯವನ್ನು ಕಂಪನಿಯು ಸ್ಥಗಿತಗೊಳಿಸುತ್ತದೆ. ಜಿಯೊ ಈಗಾಗಲೇ 5ಜಿ ನೆಟವರ್ಕ್ ಪರೀಕ್ಷೆ ನಡೆಸುತ್ತಿದ್ದು, ಇದು ಆರಂಭವಾದರೆ ಗ್ರಾಹಕರಿಗೆ 1 ಜಿಬಿಪಿಎಸ್ ವೇಗದಲ್ಲಿ ಡೇಟಾ ಸಂಪರ್ಕ ದೊರಕಲಿದೆ.

### ಕರೆನ್ಸಿ ಲೋನ್‌ನ ಮಾದರಿ!

ಅಂಗಡಿಗೆ ಹೋಗಿ ಮೊಬೈಲ್ ಕರೆನ್ಸಿ ರೀಚಾರ್ಜ್ ಮಾಡಿಸಲು ಆಗದಂತಹ ತುರ್ತು ಪರಿಸ್ಥಿತಿ ವೇಳೆ ತಮ್ಮ ಗ್ರಾಹಕರ ಅನುಕೂಲಕ್ಕೆಂದು ಏರ್‌ಟೆಲ್, ಐಡಿಯಾ, ವೋಡಾಫೋನ್ ಸೇರಿದಂತೆ ಪ್ರಮುಖ ಟೆಲಿಕಾಂ ಸಂಸ್ಥೆಗಳು ಕೆಲ ವರ್ಷಗಳ ಹಿಂದೆ 'ಕರೆನ್ಸಿ ಲೋನ್' ನೀಡುತ್ತಿದ್ದವು. ಇದನ್ನು ಬಳಸಿಕೊಳ್ಳುತ್ತಿದ್ದ ಗ್ರಾಹಕರು ತಮ್ಮ ಮೊಬೈಲ್ ರೀಚಾರ್ಜ್ ಮಾಡಿಸಿ ಬಳಿಕ ಬಿಡುವು ಸಿಕ್ಕಾಗ ಅಂಗಡಿಗೆ ಹೋಗಿ ಮೊಬೈಲ್ ರೀಚಾರ್ಜ್ ಮಾಡಿಸುತ್ತಿದ್ದರು. ಹೀಗೆ ರೀಚಾರ್ಜ್ ಮಾಡಿಸಿದಾಗ ಈ ಹಿಂದೆ ಪಡೆದ ಪಡೆದ ಕರೆನ್ಸಿ ಲೋನ್ ಮತ್ತು ಅದಕ್ಕೆ ತಗಲುವ ಹೆಚ್ಚುವರಿ ಶುಲ್ಕವನ್ನು ಟೆಲಿಕಾಂ ಕಂಪನಿಗಳು ಕಡಿತಗೊಳಿಸಿಕೊಂಡು ಬಾಕಿ ಹಣ ಕರೆನ್ಸಿ ರೂಪದಲ್ಲಿ ಗ್ರಾಹಕರ ಖಾತೆಗೆ ಜಮೆ ಮಾಡುತ್ತಿದ್ದವು. ಇದೇ ಮಾದರಿಯನ್ನು ಜಿಯೊ ಅನುಸರಿಸಿದೆ.

### ಲೋನ್ ಪಡೆಯುವುದು ಹೇಗೆ?

- ಜಿಯೊ ಬಳಕೆದಾರರು ಡೇಟಾ ಲೋನ್ ಪಡೆಯಬೇಕಾದರೆ ತಮ್ಮ ಸ್ಮಾರ್ಟ್‌ಫೋನ್‌ನಲ್ಲಿ ಮೊದಲು ಮೈ ಜಿಯೊ (My Jio) ಆ್ಯಪ್ ಅನ್ನು ಇನ್‌ಸ್ಟಾಲ್ ಮಾಡಿಕೊಳ್ಳಬೇಕು.
- ಆ್ಯಪ್ ಅನ್ನು ತೆರೆದು ಮೇಲ್ಭಾಗದಲ್ಲಿ ಕಾಣುವ ಮೆನು (ಮೂರು ಅಡ್ಡಗೆರೆಯ ಚಿಹ್ನೆ) ಆಯ್ಕೆಯನ್ನು ಕ್ಲಿಕ್ಕಿಸಬೇಕು.
- ಬಳಿಕ 'ಎಮರ್ಜೆನ್ಸಿ ಡಾಟಾ ಲೋನ್' (Emergency Data Loan) ಎಂಬ ಆಯ್ಕೆ ಕಾಣುತ್ತದೆ. ಅದನ್ನು ಒತ್ತಬೇಕು.
- ಬಳಿಕ ಲೋನ್ ಬಗೆಗಿನ ಪುಟ್ಟ ಮಾಹಿತಿ ತೆರೆದುಕೊಳ್ಳುತ್ತದೆ. 'ನೋ ಮೋರ್' (Know more) ಆಯ್ಕೆಯನ್ನು ಕ್ಲಿಕ್ಕಿಸಿದರೆ ಲೋನ್ ಬಗೆಗಿನ ಸಂಪೂರ್ಣ ಮಾಹಿತಿಯು ಲಭ್ಯವಾಗುತ್ತದೆ. ಅದರ ಕೆಳಗೆ 'ಪ್ರೊಸೀಡ್' (Proceed) ಆಯ್ಕೆಯನ್ನು ಕ್ಲಿಕ್ಕಿಸಿದರೆ 'ಗೆಟ್ ಎಮರ್ಜೆನ್ಸಿ ಡಾಟಾ ಲೋನ್' (Get emergency data) ಎಂಬ ಮತ್ತೊಂದು ಆಯ್ಕೆಯು ಕಾಣಿಸುತ್ತದೆ.
- ಅದನ್ನು ಕ್ಲಿಕ್ಕಿಸಿದರೆ ಕಾಣುವ 'ಆಕ್ಟಿವೇಟ್ ನೌ' (Activate now) ಎಂಬ ಆಯ್ಕೆಯನ್ನು ಒತ್ತಿದರೆ 1 ಜಿಬಿ ಡಾಟಾವು ನಿಮ್ಮ ಖಾತೆಗೆ ಜಮೆ ಆಗುತ್ತದೆ. ■